KAKB720013802016

Presented on : 20-07-2016
Registered on : 20-07-2016
Decided on : 07.03.2026
Duration : 09Years 07 Months 18 Days

**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಸೇಡಂ**

**ಉಪಸ್ಥಿತರುಃ**

**ಶ್ರೀ ಬಾಲು,**
ಬಿ.ಎ., ಎಲ್‌ಎಲ್.ಬಿ.,
ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸೇಡಂ

**ಸಿ.ಸಿ.ನಂ.598/2016**

**ದಿನಾಂಕಃ 07 ನೇ ಮಾರ್ಚ್ 2026 ರಂದು**

**ಫಿರ್ಯಾದಿದಾರರುಃ**

ಕರ್ನಾಟಕ ರಾಜ್ಯ (ಸೇಡಂ ಪೊಲೀಸರಿಂದ)

**(ಸಹಾಯಕ ಸರ್ಕಾರಿ ಅಭಿಯೋಜಕರು)**

**- ವಿರುದ್ಧ -**

**ಆರೋಪಿತರುಃ**

1. ಜಗದೀಶ ತಂದೆ ಮರೆಪ್ಪ ಕಲ್ಲೂರ,
ವಯಸ್ಸುಃ 21 ವರ್ಷ, ಉದ್ಯೋಗಃ ಗಾರೆಕೆಲಸ,

2. ಮರೆಪ್ಪ ತಂದೆ ಸಾಬಣ್ಣ ಕಲ್ಲೂರ,
ವಃ 50 ವರ್ಷ, ಉಃ ಕೂಲಿ ,

3. ಮಹಾದೇವಿ ಗಂಡ ಮರೆಪ್ಪ ಕಲ್ಲೂರ,
ವಃ 45 ವರ್ಷ, ಉಃ ಕೂಲಿ ,

4. ರಾಗಪ್ಪ ತಂದೆ ಸಂಗಪ್ಪ ಕಲ್ಲೂರ,
ವಃ 30 ವರ್ಷ, ಉಃ ಕೂಲಿ ,

5. ಸಾಬು ತಂದೆ ಸಂಗಪ್ಪ ಕಲ್ಲೂರ,
ವಃ 32 ವರ್ಷ, ಉಃ ಕೂಲಿ ,
ಎಲ್ಲರೂ ಸಾಃ ಸೂರವಾರ ಗ್ರಾಮ, ತಾಃ ಸೇಡಂ. **(Split up)**

**(ಆ-1,2,4 ಶ್ರೀ ಎಸ್.ಆರ್.ಪಿ. , ವಕೀಲರು)**
**(ಆ-3 ಮೃತಪಟ್ಟಿರುತ್ತಾರೆ)**

1. ಪ್ರಕರಣ ನಡೆದ ದಿನಾಂಕ : 12.01.2016
2. ಪ್ರಕರಣ ದಾಖಲಾದ ದಿನಾಂಕ : 05.02.2016
3. ಫಿರ್ಯಾದಿದಾರರ ಹೆಸರು : ರೇಖಾ ಗಂಡ ಜಗದೀಶ
4. ಸಾಕ್ಷಿಗಳ ವಿಚಾರಣೆ ಪ್ರಾರಂಭದ ದಿನಾಂಕ: 27.02.2026
5. ಸಾಕ್ಷಿಗಳ ವಿಚಾರಣೆ ಮುಕ್ತಾಯದ ದಿನಾಂಕ: 27.02.2026
6. ಆಪಾದನೆಗಳು : ಭಾ.ದಂ.ಸಂ.ಕಲಂ.498(ಎ), 504,506 ಮತ್ತು 109 ಸಂಗಡ 149.
7. ನ್ಯಾಯಾಧೀಶರ ತೀರ್ಮಾನ : ಅಂತಿಮ ಆದೇಶದಂತೆ

ಸಹಿ/-
**(ಬಾಲು)**
**ಸಿವಿಲ್ ನ್ಯಾಯಾಧೀಶರು**
**ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸೇಡಂ .**

**ತೀರ್ಪು**

ಎ.ಎಸ್.ಐ, ಸೇಡಂ ಪೋಲಿಸ ಠಾಣೆ ಇವರು ಆರೋಪಿತರ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 498(ಎ), 504, 506 ಮತ್ತು 109 ಸಂಗಡ 149 ರನ್ವಯ ದಂಡನೀಯ ಅಪರಾಧವನ್ನು ಎಸಗಿರುತ್ತಾರೆಂದು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಮೊಕದ್ದಮ್ಮೆಯ ಸಂಕ್ಷಿಪ್ತ ವಿವರಣೆ:-**

ದಿನಾಂಕ 21.03.2015 ರಂದು ಸೇಡಂ ಪೋಲೀಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ಸೂರವಾರ ಗ್ರಾಮದಲ್ಲಿ ಫಿರ್ಯಾದಿದಾರಳು ಆರೋಪಿ.1 ನೇದ್ದವನ ಸಂಗಡ ನೋಂದಾಯಿತ ಮದುವೆ ಮಾಡಿಕೊಂಡಿದ್ದು ನಂತರ ಫಿರ್ಯಾದಿಯು ಆರೋಪಿತರ ಜೊತೆಗೆ ತನ್ನ

ಮನೆಯಲ್ಲಿದ್ದಾಗ ಸ್ವಲ್ಪ ದಿನಗಳ ನಂತರ 1 ರಿಂದ 5 ನೇ ಆರೋಪಿತರು ಫಿರ್ಯಾದಿಗೆ ಅವಾಚ್ಯವಾಗಿ ಬೈಯುವುದು ಮತ್ತು ನೀನು ನಿನ್ನ ತವರು ಮನೆಯಿಂದ ಹಣ ತೆಗೆದುಕೊಂಡು ಬಾ ಅಂತಾ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುತ್ತಾ ಬಂದಿದ್ದು ಇರುತ್ತದೆ ಮತ್ತು ನೀನು ನಿನ್ನ ತವರು ಮನೆಯಿಂದ ಏನು ತರದೇ ನಮ್ಮ ಮನೆಗೆ ಬಂದಲ್ಲಿ ಜೀವ ಸಹಿತ ಬಿಡುವುದಿಲ್ಲ ಅಂತಾ ಫಿರ್ಯಾದಿಗೆ ಜೀವದ ಬೆದರಿಕೆ ಹಾಕಿದ್ದು ಎಂದು ಆರಂಭದಲ್ಲಿ ಸೇಡಂ ಪೋಲೀಸ ಠಾಣೆಯಲ್ಲಿ ದೂರನ್ನು ಸಲ್ಲಿಸಿದ್ದರು ಸಹ ಯಾರೂ ಕೂಡಾ ಗಂಭೀರವಾಗಿ ತೆಗೆದುಕೊಂಡಿಲ್ಲ ಹಾಗೂ ಪ್ರಕರಣವನ್ನು ದಾಖಲಿಸಿಲ್ಲ, ಆದ್ದರಿಂದ ಫಿರ್ಯಾದಿದಾರರು ಖಾಸಗಿ ದೂರನ್ನು ಸಲ್ಲಿಸಿರುತ್ತಾರೆ. ತದನಂತರ ಸದರಿ ಪ್ರಕರಣವು ಠಾಣಾಧಿಕಾರಿ ಸೇಡಂ ಪೋಲಿಸ ಠಾಣೆ ಇವರಿಗೆ ಪ್ರ ವ. ವರದಿ ದಾಖಲಿಸಿಕೊಂಡು ತನಿಖೆ ಕೈಗೊಂಡು ವರದಿಯನ್ನು ಸಲ್ಲಿಸಲು ನಿರ್ದೇಶಿಸಲಾಗಿತ್ತು.

3. ಸದರಿ ಫಿರ್ಯಾದಿಯ ಆಧಾರದ ಮೇಲೆ ಸೇಡಂ ಪೊಲೀಸರು ತಮ್ಮ ಠಾಣಾ ಗುನ್ನಾ ನಂ.33/2016 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ತನಿಖೆ ಪೂರ್ಣಗೊಂಡ ನಂತರ ಆರೋಪಿತರ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 498(ಎ), 504, 506 ಮತ್ತು 109 ಸಂಗಡ 149 ರನ್ವಯ ದಂಡನೀಯ ಅಪರಾಧವನ್ನು ಎಸಗಿರುತ್ತಾರೆಂದು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

4. ದೋಷಾರೋಪಣೆ ಸಲ್ಲಿಸಿದ ನಂತರ ಪ್ರಕರಣದ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತರ ವಿರುದ್ದ ಸಮನ್ಸ ಜಾರಿ ಮಾಡಿ, ಆರೋಪಿತರ ಹಾಜರಾತಿಯನ್ನು ಪಡೆಯಲಾಯಿತು. ನಂತರ ಆರೋಪಿತರನ್ನು ಸೂಕ್ತ ಜಾಮೀನ ಮೇಲೆ ಬಿಡುಗಡೆ ಮಾಡಲಾಯಿತು. ಪ್ರಕರಣ ವಿಚಾರಣೆಯಲ್ಲಿದ್ದಾಗ 3 ನೇ ಆರೋಪಿತರು ಮೃತಪಟ್ಟಿರುತ್ತಾರೆ. ದಿನಾಂಕ 19.08.2024 ರ

ಆದೇಶದಂತೆ 5 ನೇ ಆರೋಪಿತರ ವಿರುದ್ದ ವಿಭಜಿತ ಪ್ರಕರಣವನ್ನು ದಾಖಲಿಸಲಾಗಿದೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಪ್ರಕಾರ ದೋಷಾರೋಪಣೆ ಪತ್ರದ ನಕಲು ಪ್ರತಿಯನ್ನು ಆರೋಪಿತರಿಗೆ ನೀಡಿ, ದೋಷಾರೋಪಣೆಯನ್ನು ರಚಿಸುವ ಮುನ್ನ ವಾದ ವಿವಾದವನ್ನು ಆಲಿಸಲಾಯಿತು. ನಂತರ ಭಾರತೀಯ ದಂಡ ಸಂಹಿತೆ ಕಲಂ 498(ಎ), 504, 506 ಮತ್ತು 109 ಸಂಗಡ 149 ರನ್ವಯ ದೋಷಾರೋಪಣೆಯನ್ನು ರಚಿಸಿ ಆರೋಪಿತರಿಗೆ ಓದಿ ಹೇಳಲಾಗಿ, ಸದರಿ ದೋಷಾರೋಪಣೆಯ ಆರೋಪಗಳನ್ನು ಒಪ್ಪಿಕೊಂಡಿರುವುದಿಲ್ಲ ಮತ್ತು ವಿಚಾರಣೆ ನಡೆಯಬೇಕೆಂದು ಕೇಳಿಕೊಂಡಿರುತ್ತಾರೆ.

5. ಅಭಿಯೋಜನೆಯು ಆರೋಪಿತರ ವಿರುದ್ದ ಅಪಾದನೆಗಳನ್ನು ರುಜುವಾತು ಪಡಿಸುವ ಸಲುವಾಗಿ ಚಾಸಾ.1 ರವರನ್ನು ಪ್ರಾಸಾ.1 ಎಂದು ವಿಚಾರಣೆ ಮಾಡಿದ್ದು ಹಾಗೂ ನಿಪಿ.1 ದಾಖಲಾತಿಯನ್ನು ಗುರುತಿಸಿಕೊಂಡಿರುತ್ತದೆ. ಅಭಿಯೋಜಕರು ಇನ್ನುಳಿದ ಸಾಕ್ಷ್ಯಗಳ ವಿಚಾರಣೆ ಮಾಡಬೇಕೆಂದು ಕೋರಿರುತ್ತಾರೆ. ಆದರೆ ಪಿ.ಡಬ್ಲ್ಯೂ-1 ರವರು ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ, ಅಭಿಯೋಜಕರವರ ವಿನಂತಿಯನ್ನು ತಳ್ಳಿಹಾಕಿ, ಅಭಿಯೋಜನೆಯ ಪರ ಸಾಕ್ಷ್ಯ ವಿಚಾರಣೆಯನ್ನು ಮುಕ್ತಾಯಗೊಳಿಸಲಾಗಿರುತ್ತದೆ.

6. ಪಿ.ಡಬ್ಲ್ಯೂ -1 ರವರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದರಿಂದ, ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆರೋಪಿತರ ಹೇಳಿಕೆಯನ್ನು ಕೈ ಬಿಡಲಾಗಿದೆ.

7. ಉಭಯ ಪಕ್ಷಗಾರರ ವಾದ ವಿವಾದವನ್ನು ಆಲಿಸಲಾಯಿತು.

8. ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಬಂದಿರುತ್ತವೆ.

## ಅಂಶಗಳು

1. ದಿನಾಂಕ 21-03-2015ರಂದು ಸೇಡಂ ಪೋಲೀಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ಸೂರವಾರ ಗ್ರಾಮದಲ್ಲಿ ಫಿರ್ಯಾದಿದಾರಳು ಆರೋಪಿ.1 ನೇದ್ದವನ ಸಂಗಡ ನೋಂದಾಯಿತ ಮದುವೆ ಮಾಡಿಕೊಂಡಿದ್ದು ನಂತರ ಫಿರ್ಯಾದಿಯು ಆರೋಪಿತರ ಜೊತೆಗೆ ತನ್ನ ಮನೆಯಲ್ಲಿದ್ದಾಗ ಸ್ವಲ್ಪ ದಿನಗಳ ನಂತರ ಆರೋಪಿ.1 ರಿಂದ 5 ನೇದ್ದವರು ಪಿರ್ಯಾದಿಗೆ ಅವಾಚ್ಯವಾಗಿ ಬೈಯುವುದು ಮತ್ತು ನೀನು ನಿನ್ನ ತವರು ಮನೆಯಿಂದ ಹಣ ತೆಗೆದುಕೊಂಡು ಬಾ ಅಂತಾ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುತ್ತಾ ಬಂದಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 498(ಎ) ಸಹ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

2. ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು, ಪಿರ್ಯಾದಿಗೆ ಅವಾಚ್ಯವಾಗಿ ಬೈಯುವುದು ಮಾಡಿದ್ದು, ಆ ಮೂಲಕ ಆರೋಪಿತರು ಭಾ.ದಂ.ಸಂ. ಕಲಂ 504 ಸಹವಾಚಕ ಕಲಂ 149ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

3. ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ಆರೋಪಿತರು ಫಿರ್ಯಾದಿಗೆ ನೀನು ನಿನ್ನ ತವರು ಮನೆಯಿಂದ ಏನು ತರದೇ ನಮ್ಮ ಮನೆಗೆ

ಬಂದಲ್ಲಿ ಜೀವ ಸಹಿತ ಬಿಡುವುದಿಲ್ಲ ಅಂತಾ ಫಿರ್ಯಾದಿಗೆ ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ಭಾ.ದಂ.ಸಂ. ಕಲಂ 506 ಸಹವಾಚಕ ಕಲಂ 149ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

4. ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ಆರೋಪಿ.1 ನೇದ್ದವನು ಫಿರ್ಯಾದಿಗೆ ಹೊಡೆ ಬಡೆ ಮಾಡುವಾಗ ಆರೋಪಿ.2 ರಿಂದ 5 ರವರೂ ಸಹ ಅಕ್ರಮಕೂಟ ರಚಿಸಿಕೊಂಡು ಬಂದು, ಪಿರ್ಯಾದಿಗೆ ಕಿರುಕುಳ ಕೊಡುತ್ತಿದ್ದದ್ದು ಮತ್ತು ಆರೋಪಿ.1 ನೇದ್ದವನಿಗೆ ಜಗಳ ಮಾಡಲು ಪ್ರಚೋದನೆ ನೀಡುತ್ತಿದ್ದದ್ದು, ಆ ಮೂಲಕ ಆರೋಪಿತರು ಭಾ.ದಂ.ಸಂ. ಕಲಂ 109 ಸಹವಾಚಕ ಕಲಂ 149ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

5. ಯಾವ ಆದೇಶ ಅಥವಾ ಶಿಕ್ಷೆ?

9. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೆಃ

| | | |
|---|---|---|
| ಅಂಶ ನಂ.1 ರಿಂದ 4 | : | ನಕರಾತ್ಮಕವಾಗಿ. |
| ಅಂಶ ನಂ.5 | : | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ |

**ಕಾ ರ ಣ ಗ ಳು**

10. **ಅಂಶ ನಂ.1 ರಿಂದ 4:-** ಸದರಿ ಎಲ್ಲಾ ಅಂಶಗಳು ಒಂದಕ್ಕೊಂದು ಅಂತರ್ಗತವಾಗಿರುವುದರಿಂದ, ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

11. ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತರ ಮೇಲೆ ಆಪಾದಿಸಿದ ಆರೋಪವನ್ನು ಸಾಬೀತು ಪಡಿಸಲು ಚಾ.ಸಾ.1 ರೇಖಾ ತಂದೆ ಜಗದೀಶ ಇವರನ್ನು ಪ್ರಾ.ಸಾ.1 ಎಂದು ಸಾಕ್ಷ್ಯಿ ಮಾಡಿಸಿದ್ದು ಇರುತ್ತದೆ. ಪ್ರಾಸಾ.1 ರವರು ಪಿರ್ಯಾಧಿ ಆಗಿರುತ್ತಾರೆ.

12. ಪ್ರಾಸಾ.1 ರವರು ಈ ಪ್ರಕರಣದ ಪಿರ್ಯಾಧಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ, ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ರೀತಿಯ ಮಾಹಿತಿ ಇರುವುದಿಲ್ಲ. ನಾನು ಯಾವುದೇ ರೀತಿಯ ಫಿರ್ಯಾದಿಯನ್ನು ನೀಡಿರುವುದಿಲ್ಲ. ಸಾಕ್ಷಿಯು ಖಾಸಗಿ ದೂರು ದಾಖಲಾತಿಯನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ಆದರೇ ನಿಪಿ.1ರಲ್ಲಿರುವ ವಿಷಯಗಳು ನಮಗೆ ಗೊತ್ತಿರುವುದಿಲ್ಲ ಎಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸರ್ಕಾರಿ ಸಹಾಯಕ ಅಭಿಯೋಜಕರು ಸುದಿರ್ಘ ಕಾಲ ಪಾಟೀ ಸವಾಲು ಮಾಡಿದರೂ ಸಹ ಅಭಿಯೋಜನೆಗೆ ಪೂರಕವಾದಂತಹ ಯಾವುದೇ ಅಂಶಗಳನ್ನು ಅಭಿಯೋಜನೆಯ ಪರ ಹೊರ ತರಲು ಯಶಸ್ವಿಯಾಗಿರುವುದಿಲ್ಲ.

13. ಈ ಪ್ರಕರಣದ ಬಹು ಮುಖ್ಯ ಸಾಕ್ಷಿದಾರರಾದ ಚಾಸಾ.1 ಸದರಿ ಪ್ರಕರಣದ ಪಿರ್ಯಾದಿದಾರರು. ತಮ್ಮ ಮುಖ್ಯ ವಿಚಾರಣೆಯಲ್ಲಿ ಯಾವುದೇ ಘಟನೆ ನಡೆದ ಬಗ್ಗೆ ಸಾಕ್ಷಿ ಹೇಳಿಲ್ಲ, ಅಲ್ಲದೆ ಪ್ರಾಸಾ.1ರವರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ, ಆದುದರಿಂದ

ಅಭಿಯೋಜನೆಯ ಪ್ರಕರಣದಲ್ಲಿ ಯಾವುದೇ ಹುರುಳಿಲ್ಲ ಅಂತಾ ಕಂಡುಬರುತ್ತದೆ. ಅಭಿಯೋಜಕರು ಇನ್ನುಳಿದ ಸಾಕ್ಷ್ಯಗಳ ವಿಚಾರಣೆ ಮಾಡಬೇಕೆಂದು ಕೋರಿರುತ್ತಾರೆ. ಆದರೆ ಪಿ.ಡಬ್ಲ್ಯೂ-1ರವರು ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ, ಅಭಿಯೋಜಕರವರ ವಿನಂತಿಯನ್ನು ತಳ್ಳಿಹಾಕಿ, ಅಭಿಯೋಜನೆಯ ಪರ ಸಾಕ್ಷ್ಯ ವಿಚಾರಣೆಯನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಹಾಗೂ ಅಭಿಯೋಜನೆಯು ಆರೋಪಿತರ ವಿರುದ್ಧ ಆಪಾದಿಸಲ್ಪಟ್ಟ ಕೃತ್ಯವನ್ನು ಆರೋಪಿತರು ಎಸಗಿದ್ದಾರೆ ಎನ್ನುವುದನ್ನು ನಿರೂಪಿಸಲು ಬಲವಾದ ಮತ್ತು ಒಪ್ಪಿಕೊಳ್ಳಬಹುದಾದ ಸಾಕ್ಷಾಧಾರಗಳನ್ನು ಒದಗಿಸಿ ನಿರೂಪಿಸುವಲ್ಲಿ ವಿಫಲವಾಗಿದೆ ಎಂದು ಹೇಳಬಹುದು. ಅದೇ ರೀತಿ ಅಭಿಯೋಜನೆಯು ಆರೋಪಿತರ ಕೃತ್ಯ ನಿರೂಪಿಸುವಲ್ಲಿ ವಿಫಲವಾಗಿದೆ. ಆದುದರಿಂದ ಅಭಿಯೋಜನೆಯು ಆರೋಪಿತರ ವಿರುದ್ಧ ಆಪಾದನೆಯನ್ನು ಸಂಶಯಾತೀತವಾಗಿ ರುಜುವಾತು ಪಡಿಸಲು ವಿಫಲವಾಗಿದೆ ಎಂದು ಹೇಳುತ್ತಾ ಅಂಶ ಸಂಖ್ಯೆ 1 ರಿಂದ 4ನ್ನು **ನಕಾರಾತ್ಮಕವಾಗಿ** ಉತ್ತರಿಸಿದ್ದೇನೆ.

14. **ಅಂಶ ನಂ.5:-** ಈ ಮೇಲೆ ಹೇಳಿದ ಅಂಶ ನಂ.1 ರಿಂದ 4ರ ಮೇಲಿನ ಚರ್ಚೆಯಂತೆ ಹಾಗೂ ಕಾರಣಗಳಿಗಾಗಿ ಈ ಕೆಳಗಿನಂತೆ ಅಂತಿಮವಾಗಿ ಆದೇಶಿಸಿರುತ್ತೇನೆ.

## ಆ ದೇ ಶ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 248 (1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಆರೋಪಿ ನಂ. 1, 2 ಮತ್ತು 4 ರವರನ್ನು ಭಾರತೀಯ ದಂಡ ಸಂಹಿತೆ ಕಲಂ 498(ಎ), 504, 506 ಮತ್ತು 109 ಸಂಗಡ 149 ರನ್ವಯ ಶಿಕ್ಷಾರ್ಹ ಅಪರಾಧಗಳಿಗೆ ನಿರ್ದೋಷಿಗಳೆಂದು ಬಿಡುಗಡೆ ಗೊಳಿಸಲಾಗಿದೆ.**

**3 ನೇ ಆರೋಪಿತರು ಮೃತಪಟ್ಟಿರುತ್ತಾರೆ.**

**5 ನೇ ಆರೋಪಿತರ ವಿರುದ್ಧ ವಿಭಜಿತ ಪ್ರಕರಣವನ್ನು ದಾಖಲಿಸಲಾಗಿದೆ.**

**ಆರೋಪಿತರು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಭದ್ರತೆಗಳನ್ನು 6 ತಿಂಗಳವರೆಗೆ ವಿಸ್ತರಿಸಲಾಗಿದೆ.**

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದು, ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ 07ನೇ ಮಾರ್ಚ್ 2026 ರಂದು ತೀರ್ಪನ್ನು ಘೋಷಿಸಲಾಯಿತು)

**ಸಹಿ/-**
**(ಬಾಲು)**
**ಸಿವಿಲ್ ನ್ಯಾಯಾಧೀಶರು**
**ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸೇಡಂ .**

**ಅನುಬಂಧ**

**ಅಭಿಯೋಜನೆಯ ಪರವಾಗಿ ಮಾಡಿಸಲಾದ ಸಾಕ್ಷ್ಯಗಳು:**

ಪಿ.ಡಬ್ಲ್ಯೂ -1 : ರೇಖಾ ತಂದೆ ಜಗದೀಶ್

**ಅಭಿಯೋಜನೆಯ ಪರವಾಗಿ ಮಾಡಿಸಲಾದ ಸಾಕ್ಷ್ಯಗಳು:**

ನಿ.ಪಿ.1 : ದೂರು
ನಿಪಿ.1(ಎ) : ಪ್ರಾಸಾ.1ರವರ ಸಹಿ

**ಅಭಿಯೋಜನೆಯ ಪರ ಗುರುತಿಸಲಾದ ಮುದ್ದೆ ಮಾಲುಗಳ ವಿವರ:**

- ಇಲ್ಲ -

**ಆರೋಪಿತರ ಪರವಾಗಿ ವಿಚಾರಣೆಗೊಳಪಡಿಸಲಾದ ಸಾಕ್ಷಿದಾರರ ವಿವರ:**

- ಇಲ್ಲ -

**ಆರೋಪಿತರ ಪರವಾಗಿ ಗುರುತಿಸಲಾದ ದಾಖಲೆಗಳ ವಿವರ:**

- ಇಲ್ಲ -

ಸಹಿ/-
**(ಬಾಲು)**
**ಸಿವಿಲ್ ನ್ಯಾಯಾಧೀಶರು**
**ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸೇಡಂ .**

BALU Digitally signed by BALU Date: 2026.03.07 16:47:18 +0530